**ಆಕಾಶವಾಣಿ** **23.06.2024**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ರಾಜ್ಯದ ಪಾಲಿನ, 11 ಸಾವಿರದ 495 ಕೋಟಿ ರೂಪಾಯಿ ಅನುದಾನವನ್ನು, ಕೇಂದ್ರ ಶೀಘ್ರ ಬಿಡುಗಡೆ ಮಾಡಲಿ – ಕೃ ್ಣ ಬೈರೇಗೌಡ, ಆಗ್ರಹ.**
- **ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ, 'ಉತ್ಪನ್ನಗಳ ಸತೆ', ವಿಶಿಷ್ಟ – ಎನ್. ಚಲುವರಾಯಸ್ವಾಮಿ, ಶ್ಲಾಘನೆ.**
- **'ಯುವಜನತೆಗೆ ಉದ್ಯೋಗ'; ಕೌಶಲಾಭಿವೃದ್ಧಿ ಇಲಾಖೆಯಿಂದ, ಮಹತ್ವದ ಯೋಜನೆ ಶೀಘ್ರ ಜಾರಿಗೆ – ಶರಣಪ್ರಕಾಶ ಪಾಟೀಲ.**
- **'ಡೇಟಾಥಾನ್'; ಅಪರಾಧ ಪ್ರಕರಣ ತಡೆಗಟ್ಟಲು, ನೂತನ ತಂತ್ರಜ್ಞಾನ ಬಳಕೆಗೆ ಪೊಲೀಸ್ ಇಲಾಖೆ, ಆದ್ಯತೆ – ಪ್ರಣಬ್ ಮೊಹಾಂತಿ.**

<><><>

**ಈಗ ವಾರ್ತೆಗಳ ವಿವರ**

<><><>

**ಕೇಂದ್ರದ ಹಣಕಾಸು ಆಯೋಗದ ಶಿಫಾರಸಿನಂತೆ, 11 ಸಾವಿರದ 495 ಕೋಟಿ ರೂಪಾಯಿ ಅನುದಾನವನ್ನು, ಕೇಂದ್ರ ಸರ್ಕಾರ ಆದಷ್ಟು ಬೇಗ, ರಾಜ್ಯಕ್ಕೆ ಬಿಡುಗಡೆ ಮಾಡುವಂತೆ, ಕಂದಾಯ ಖಾತೆ ಸಚಿವ ಕೃ ್ಣ ಬೈರೇಗೌಡ, ಕೋರಿದ್ದಾರೆ.**

**ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಗೆ, 5 ಸಾವಿರದ 300 ಕೋಟಿ ರೂಪಾಯಿ ಅನುದಾನ ಮೀಸಲಿರಿಸಿ, ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು, ಕೇಂದ್ರಕ್ಕೆ ಮನವಿ ಮಾಡಲಾಗಿದೆ.**

**ರಾಜ್ಯದ ಅಂಗನವಾಡಿ, ಆಶಾ ಮತ್ತು ಮಧ್ಯಾಹ್ನದ ಬಿಸಿಯೂಟ ತಯಾರಿಸುವ, ತಾಯಂದಿರಿಗೆ ಗೌರವ ಧನ ಹೆಚ್ಚಿಸಲು, ರಾಯಚೂರಿನಲ್ಲಿ ಏಮ್ಸ್ ಸಂಸ್ಥೆ ಸ್ಥಾಪಿಸಲು, ಅಗತ್ಯ ಕ್ರಮ ಕೈಗೊಳ್ಳಲು ಕೋರಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.**

**ವಿವಿಧ ವಸತಿ ಯೋಜನೆಗಳಡಿ, ಫಲಾನುಭವಿಗಳಿಗೆ ನೀಡಲಾಗುವ, ಕೇಂದ್ರದ ಪಾಲು, ನಗರ ಪ್ರದೇಶದಲ್ಲಿ ಒಂದೂವರೆ ಲಕ್ಷ ರೂಪಾಯಿಯಿಂದ 5 ಲಕ್ಷಕ್ಕೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 1 ಲಕ್ಷದ 20 ಸಾವಿರ ರೂಪಾಯಿಯಿಂದ, 3 ಲಕ್ಷಕ್ಕೆ ಹೆಚ್ಚಿಸುವಂತೆ, ಸಚಿವ ಕೃಷ್ಣ ಬೈರೇಗೌಡ, ಕೇಂದ್ರಕ್ಕೆ ಮನವಿ ಮಾಡಿದ್ದಾರೆ.**

<><><>

**ಗುಲಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ, 50 ಹಾಸಿಗೆಗಳ ತೀವ್ರ ನಿಗಾ ಘಟಕ ಹಾಗೂ 30 ಹಾಸಿಗೆಗಳ ಸಾಮರ್ಥ್ಯದ, ಸುಟ್ಟ ಗಾಯಗಳ ಚಿಕಿತ್ಸಾ ಘಟಕ ನಿರ್ಮಾಣ ಕಾಮಗಾರಿಗೆ, ವೈದ್ಯಕೀಯ ಶಿಕ್ಷಣ ಹಾಗೂ ಕಲಬುರಗಿ ಜಿಲ್ಲೆ, ಉಸ್ತುವಾರಿ ಸಚಿವ ಡಾಕ್ಟರ್ ಶರಣಪ್ರಕಾಶ ಪಾಟೀಲ, ಚಾಲನೆ ನೀಡಿದರು.**

ಬಳಿಕ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗದ ಮಕ್ಕಳಿಗೆ ಸೂಪರ್ ಸ್ಪೆ ಾಲಿಟಿ ಚಿಕಿತ್ಸೆ ನೀಡಲು, ಅನುಕೂಲ ಕಲ್ಪಿಸಲಾಗುವುದು. ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯ ಶಾಖೆಯನ್ನು, ಕಲಬುರಗಿಯಲ್ಲಿ ನಿರ್ಮಿಸಲು, ಯೋಜಿಸಲಾಗಿದೆ ಎಂದರು.

ಕಲಬುರಗಿ ಜಿಲ್ಲೆಯ ಜನ, ಹೆಚ್ಚಿನ ಚಿಕಿತ್ಸೆಗಾಗಿ ಸೋಲಾಪುರ, ಹೈದ್ರಾಬಾದ ಅಥವಾ ಬೆಂಗಳೂರಿಗೆ ಹೋಗುವುದು, ಅನಿವಾರ್ಯವಾಗಿತ್ತು. 371 ಜೆ ಕಲಂ ಅಡಿ, ಪ್ರಾದೇಶಿಕ ಅಸಮಾನತೆ ನಿವಾರಿಸಲು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ನಿರ್ಮಿಸಲು, ಕಾಲಮಿತಿಯಲ್ಲಿ ಹಲವು ಯೋಜನೆಗಳನ್ನು ಅನುಷ್ಟಾನ ಗೊಳಿಸಲಾಗುತ್ತಿದೆ ಎಂದು, ಸಚಿವ ಶರಣಪ್ರಕಾಶ ಪಾಟೀಲ ನುಡಿದರು.

<><><>

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಉತ್ಪನ್ನಗಳ ಸಂತೆ ಆಯೋಜಿಸಿರುವುದು ಶ್ಲಾಘನೀಯ ಎಂದು, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ ಶ್ಲಾಘಿಸಿದ್ದಾರೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದ್ದ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಉತ್ಪನ್ನಗಳ ಸಂತೆಗೆ ಚಾಲನೆ ನೀಡಿ, ಅವರು ಮಾತನಾಡಿದರು.

ಅಭಿವೃದ್ಧಿಪಡಿಸಲಾದ ವಿವಿಧ ತಾಂತ್ರಿಕತೆಗಳ ಉತ್ಪನ್ನಗಳು ಹಾಗೂ ಕೃಷಿ ಪರಿಕರಗಳನ್ನು ಜನಪ್ರಿಯಗೊಳಿಸಲು, ಆಯೋಜಿಸಿದ ಸಂತೆ, ವಿಶೇಷವಾಗಿದೆ ಎಂದರು.

ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ ಡಾಕ್ಟರ್ ಎಸ್.ವಿ. ಸುರೇಶ ಮಾತನಾಡಿ, ಆರು ದಶಕಗಳ ಸುಧೀರ್ಘ ಅವಧಿಯಲ್ಲಿ, 485 ತಂತ್ರಜ್ಞಾನಗಳು ಹಾಗೂ 328 ತಳಿಗಳನ್ನು ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದೆ ಎಂದರು.

<><><>

ಸೌರ ಮಂಡಲದ ಅಧ್ಯಯನಕ್ಕೆ, ಮಕ್ಕಳಲ್ಲಿ ಆಸಕ್ತಿ ಮೂಡಿಸಲು, ಕಲಬುರಗಿ ಜಿಲ್ಲಾ ಪಂಚಾಯಿತಿ ವತಿಯಿಂದ, ತಲಾ 1 ಲಕ್ಷ ರೂಪಾಯಿ ವೆಚ್ಚದ, 4 ಟೆಲಿಸ್ಕೋಪ್‌ಗಳನ್ನು, ಅತಿ ಹೆಚ್ಚು ದಾಖಲಾತಿ ಹೊಂದಿರುವ, ಜಿಲ್ಲೆಯ 4 ಸರ್ಕಾರಿ ಶಾಲೆಗಳಿಗೆ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಕಲಬುರಗಿ ದಕ್ಷಿಣ ವಲಯ ತಾಲೂಕಿನ, ಶತಮಾನೋತ್ಸವ ಕುವೆಂಪು ಮಾದರಿ ಸರಕಾರಿ ಪ್ರೌಢ ಶಾಲೆ ನಂದೂರ(ಕೆ), ಮಹಾತ್ಮ ಬಸವೇಶ್ವರ ನಗರದ ಕರ್ನಾಟಕ ಪಬ್ಲಿಕ್ ಶಾಲೆ, ಚಿಂಚೋಳಿ ತಾಲೂಕಿನ ಪೋಲಕಪಳ್ಳಿ ಆದರ್ಶ ವಿದ್ಯಾಲಯ ಹಾಗೂ ಚಿತ್ತಾಪೂರ ತಾಲೂಕಿನ ಗುಂಡಗುರ್ತಿ ಸರಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಿಗೆ ಟೆಲಿಸ್ಕೋಪ್ ನೀಡಿ, ಮಕ್ಕಳಲ್ಲಿ ಖಗೋಳ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವಂತೆ, ಸಚಿವರು ಕೋರಿದರು.

<><><>

ಬೀದರ್ ನಗರಕ್ಕೆ, ನಾಗರಿಕ ವಿಮಾನಯಾನ ಸೇವೆ ಪುನಾರಂಭಿಸುವ ನಿಟ್ಟಿನಲ್ಲಿ, ರಾಜ್ಯ ಮೂಲ ಸೌಕರ್ಯ ಅಭಿವೃದ್ಧಿ ಖಾತೆ ಸಚಿವ ಎಂ.ಬಿ.ಪಾಟೀಲ್ ಅವರಿಗೆ ಪತ್ರ ಬರೆದಿದ್ದಾಗಿ, ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

ಬೀದರ್ ಜಿಲ್ಲೆಗೆ, ಉಡಾನ್ ಯೋಜನೆಯಡಿ, ನಾಗರಿಕ ವಿಮಾನಯಾನ ಸೇವೆ ಆರಂಭಿಸಿದ್ದರಿಂದ, ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ತುಂಬ ಅನುಕೂಲವಾಗಿತ್ತು. ಕಳೆದ 6 ತಿಂಗಳಿಂದ ಕೇಂದ್ರ ಸರ್ಕಾರ, ಸಬ್ಸಿಡಿ ಹಣ ಬಿಡುಗಡೆ ಮಾಡದ ಹಿನ್ನೆಲೆ, ನಾಗರಿಕ ವಿಮಾನಯಾನ ರದ್ದು ಮಾಡಲಾಗಿದೆ ಎಂದು ಸಚಿವರು ಪತ್ರದಲ್ಲಿ ತಿಳಿಸಿದ್ದಾರೆ

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಅಪರಾಧ ಪ್ರಕರಣಗಳನ್ನು ತಡೆಗಟ್ಟಲು, ನೂತನ ತಂತ್ರಜ್ಞಾನ ಆಧಾರಿತ ತಂತ್ರಾಂಶಗಳ ಬಳಕೆಗೆ ಆದ್ಯತೆ ನೀಡಲು, ಪೊಲೀಸ್ ಇಲಾಖೆ, ಡೇಟಾಥಾನ್ ಕಾರ್ಯಕ್ರಮ, ಆಯೋಜಿಸಿದೆ ಎಂದು, ಅಪರ ಪೊಲೀಸ್ ಮಹಾ ನಿರ್ದೇಶಕ ಡಾಕ್ಟರ್ ಪ್ರಣಬ್ ಮೊಹಾಂತಿ ತಿಳಿಸಿದ್ದಾರೆ.

ಬೆಂಗಳೂರಿನ ಮೈಕ್ರೊಸಾಫ್ಟ್ ಸಂಶೋಧನಾ ಕಚೇರಿಯಲ್ಲಿ, ರಾಜ್ಯ ಪೊಲೀಸ್ ಡೇಟಾಥಾನ್-2024 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರೊಟೆಕ್ಟಿವ್ ಕ್ರೈಮ್ ಅನಲಿಟಿಕ್ಸ್, ಡೇಟಾ ಗೌಪ್ಯತೆ, ಅಪಘಾತ ದತ್ತಾಂಶ ವಿಶ್ಲೇಷಣೆ ಸಮಸ್ಯೆಗಳಿಗೆ, ತಂತ್ರಜ್ಞಾನ ಆಧಾರಿತ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ ಎಂದರು.

ರಾಜ್ಯ ಅಪರಾಧ ದಾಖಲೆಗಳ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ, ಲಕ್ಷ್ಮಣ್ ನಿಂಬರಗಿ ಮಾತನಾಡಿ, ಡೇಟಾಥಾನ್‌ಗೆ 11 ಸಾವಿರಕ್ಕೂ ಹೆಚ್ಚು ಜನ ಹೆಸರು ನೊಂದಾಯಿಸಿಕೊಂಡಿದ್ದಾರೆ. 890 ಐಡಿಯಾಗಳನ್ನು ಸಲ್ಲಿಸಿದ್ದಾರೆ ಎಂದರು.

<><><>

ರಾಜ್ಯದ ಕೌಶಲ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, 'ಯುವಜನತೆಗೆ ಉದ್ಯೋಗ' ಒದಗಿಸುವ ಉದ್ದೇಶದಿಂದ, ಮಹತ್ವದ ಯೋಜನೆಗಳನ್ನು ರೂಪಿಸುತ್ತಿದೆ ಎಂದು, ಕೌಶಲ ಅಭಿವೃದ್ಧಿ ಖಾತೆ ಸಚಿವ ಡಾಕ್ಟರ್ ಶರಣ ಪ್ರಕಾಶ ಪಾಟೀಲ ತಿಳಿಸಿದ್ದಾರೆ.

ಉದ್ಯೋಗ ಪಡೆದ ಯುವಜನರಿಗೆ, ಜಿ.ಟಿ.ಟಿ.ಸಿ. ಬೆಂಗಳೂರು ಕಚೇರಿಯಲ್ಲಿ ಏರ್ಪಡಿಸಿದ್ದ, ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಭಾಗವಹಿಸಿ, ಮಾತನಾಡಿದರು.

ಮಧ್ಯ ಯುರೋಪಿನ ಸ್ಲೋವಾಕಿಯಾ ದೇಶದಲ್ಲಿ, ಕನ್ನಡ ನಾಡಿನ ಯುವಜನ ಉದ್ಯೋಗ ಪಡೆದಿರುವುದು ಸಂತಸದ ಸಂಗತಿ ಎಂದು, ಸಚಿವರು ಶ್ಲಾಘಿಸಿದರು.

<><><>

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅವ್ಯವಹಾರ ಮತ್ತು ಅಕ್ರಮಗಳನ್ನು ತಡೆಯುವ ಉದ್ದೇಶದಿಂದ, ಸಾರ್ವಜನಿಕ ಪರೀಕ್ಷೆಗಳ ಅಕ್ರಮ ವಿಧಾನಗಳ ತಡೆಗಟ್ಟುವಿಕೆ ಮಸೂದೆ, 2024ಅನ್ನು, ಕೇಂದ್ರ ಸರ್ಕಾರ ಜಾರಿಗೆ ತಂದಿದೆ.

ಶನಿವಾರದಿಂದ ಕಾಯ್ದೆ ಜಾರಿಗೊಂಡಿದ್ದು, ಈ ಕಾನೂನಿನ ಅಡಿ ಅಪರಾಧಿಗಳಿಗೆ ಗರಿಷ್ಠ 10 ವರ್ಷಗಳ ಜೈಲು ಶಿಕ್ಷೆ ಮತ್ತು 1 ಕೋಟಿ ರೂಪಾಯಿಗಳ ವರೆಗೆ ದಂಡ ವಿಧಿಸಲು ಅವಕಾಶವಿದೆ ಎಂದು, ಸಿಬ್ಬಂದಿ ಸಚಿವಾಲಯ ತಿಳಿಸಿದೆ.

<><><>

ಹಿರಿಯ ಸಾಹಿತಿ, ನಾಡೋಜ ಕಮಲಾ ಹಂಪನಾ, ಶನಿವಾರ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು.

ಹಿರಿಯ ವಿದ್ವಾಂಸರಾಗಿರುವ ಅವರ ಪತಿ, ಹಂ.ಪ. ನಾಗರಾಜಯ್ಯ, ಇಬ್ಬರು ಪುತ್ರಿಯರು ಹಾಗೂ ಒಬ್ಬ ಪುತ್ರನನ್ನು ಅವರು ಅಗಲಿದ್ದಾರೆ.

ರವೀಂದ್ರ ಕಲಾಕ್ಷೇತ್ರದ, ಸಂಸ ರಂಗ ಮಂದಿರದಲ್ಲಿ, ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಎಂ.ಎಸ್. ರಾಮಯ್ಯ ವೈದ್ಯಕೀಯ ವಿಜ್ಞಾನಗಳ ಮಹಾವಿದ್ಯಾಲಯ ಮತ್ತು ಆಸ್ಪತ್ರೆಗೆ, ಪ್ರೊಫೆಸರ್ ಕಮಲಾ ಹಂಪನಾ ಅವರ ದೇಹವನ್ನು, ಅವರ ಅಚಿತಿಮ ಇಚ್ಛೆಯಂತೆ ದಾನ ಮಾಡಲಾಯಿತು.

<><><>

ಹಿರಿಯ ಸಾಹಿತಿ ಡಾಕ್ಟರ್ ಕಮಲಾ ಹಂಪನಾ ಅವರ ನಿಧನದಿಂದ ದುಃಖಿತರಾಗಿದ್ದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಂತಿಮ ದರ್ಶನದ ಬಳಿಕ, ಶೋಕ ವ್ಯಕ್ತ ಪಡಿಸಿದರು.

ಸಾಹಿತ್ಯ ಕೃಷಿಯ ಜೊತೆಗೆ, ಸಂಶೋಧನೆ ಮತ್ತು ಬೋಧನೆಗಳಿಂದಲೂ ಜನಪ್ರಿಯರಾಗಿದ್ದ ಡಾಕ್ಟರ್ ಕಮಲಾ ಅವರದ್ದು, ಸರ್ವರಿಗೂ ಒಳಿತನ್ನು ಬಯಸಿದ ಜೀವ ಎಂದು, ಮುಖ್ಯಮಂತ್ರಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

<><><>

ಸಚಿವರಾದ ಶಿವರಾಜ ತಂಗಡಗಿ, ಎಚ್.ಕೆ. ಪಾಟೀಲ ಹಾಗೂ ಹಿರಿಯ ಸಾಹಿತಿ ಡಾಕ್ಟರ್ ಬರಗೂರು ರಾಮಚಂದ್ರಪ್ಪ ಸೇರಿದಂತೆ, ಅನೇಕ ಗಣ್ಯರು, ಸಾಹಿತಿಗಳು, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ಮನೋಹರ ಗ್ರಂಥಮಾಲೆಯ ಸಾಹಿತ್ಯ ಪರಿಚಾರಕರು, ಅಂತಿಮ ನಮನ ಸಲ್ಲಿಸಿದರು.

<><><>

ಮುಂಗಾರು ಸಾಂಸ್ಕೃತಿಕ 'ರಾಯಚೂರು ನಾಡಹಬ್ಬ'ವನ್ನು, ಅದ್ದೂರಿಯಾಗಿ ಆಚರಿಸಲಾಯಿತು.

ಮುನ್ನೂರು ಕಾಪು ಸಮಾಜ ರಾಯಚೂರಿನ ಗಂಜ್ ಆವರಣದಲ್ಲಿ ಆಯೋಜಿಸಿದ, 'ಕೃಷಿ ಪಾರಂಪರಿಕ ಕಾರ ಹುಣ್ಣಿಮೆ'ಯ ಎರಡನೇ ದಿನವಾದ ಶನಿವಾರ, ಭಾರದ ಕಲ್ಲುಗಳನ್ನು ಎಳೆಯುವ ಜೋಡೆತ್ತುಗಳ ಸ್ಪರ್ಧೆಗೆ, ಆದಿ ಶಂಕರಚಾರ್ಯ ಶಾರದಾ ಲಕ್ಷ್ಮೀ ನರಸಿಂಹ ಸ್ವಾಮೀಜಿ, ಚಾಲನೆ ನೀಡಿದರು.

ಶಾಸಕ ಎ. ಪಾಪಾ ರೆಡ್ಡಿ ಮತ್ತು ಮಾಜಿ ಶಾಸಕ ಬೆಲ್ಲಂ ನರಸ ರೆಡ್ಡಿ ಅವರ ನೇತೃತ್ವದಲ್ಲಿ ಆಯೋಜಿತವಾಗಿದ್ದ ಮುಂಗಾರು ಹಬ್ಬದಲ್ಲಿ, 40 ವಿವಿಧ ಕಲಾ ತಂಡಗಳು, ಮಹಾಲಕ್ಷ್ಮೀ ದೇವಿ ರಥೋತ್ಸವದಲ್ಲಿ ಪಾಲ್ಗೊಂಡಿದ್ದವು.

<><><>

ಮುಂದಿನ 3 ದಿನಗಳ ವರೆಗೆ, ಭಾರೀ ಮಳೆಯಾಗುವ ಸಾಧ್ಯತೆ ಹಿನ್ನೆಲೆ, ಉತ್ತರಕನ್ನಡ, ಉಡುಪಿ, ದಕ್ಷಿಣಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮೈಸೂರು ಮತ್ತು ಕೊಡಗು ಜಿಲ್ಲೆಗಳ ನದಿಗಳ ನೀರಿನ ಮಟ್ಟದಲ್ಲಿ ಗಣನೀಯ ಏರಿಕೆಯಾಗುವ ನಿರೀಕ್ಷೆಯಿದೆ.

ವಿಜಯಪುರ ಜಿಲ್ಲೆಯ ಡೋಣಿ ನದಿ ನೀರಿನ ಮಟ್ಟ, ಸಾಮಾನ್ಯಕ್ಕಿಂತ ಹೆಚ್ಚಿದ್ದು, ಪ್ರವಾಹ ಪರಿಸ್ಥಿತಿ ಎದುರಾಗುವ ಸಾಧ್ಯತೆ ಇದೆ. ನದಿ ಪಾತ್ರದ ಜನತೆ ಮುಂಜಾಗ್ರತೆ ವಹಿಸುವಂತೆ, ಸೂಚಿಸಲಾಗಿದೆ.

<><><>

ಬುಧವಾರ 26ನೇ ತಾರೀಖಿನ ವರೆಗೆ, ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ, ಭಾರೀ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಮಲೆನಾಡು, ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆಯಿದೆ.

ಗಂಟೆಗೆ 45 ರಿಂದ 65 ಕಿಲೋ ಮೀಟರ್ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದ್ದು, ಮೀನುಗಾರರು ಸಮುದ್ರಕ್ಕೆ ತೆರಳದಂತೆ ಮುನ್ನೆಚ್ಚರಿಕೆ ನೀಡಲಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ಇಂದು ಅಂತಾರಾಷ್ಟ್ರೀಯ ಒಲಿಂಪಿಕ್ ದಿನಾಚರಣೆ. ಕ್ರೀಡೆಯ ಮಹತ್ವವನ್ನು ಶ್ರೀ ಸಾಮಾನ್ಯರಲ್ಲಿ ಪ್ರಚುರ ಪಡಿಸಲು, ಈ ದಿನವನ್ನು ಮೀಸಲಿರಿಸಲಾಗಿದೆ.

ಮೈಸೂರಿನ ಕಲಾಮಂದಿರದಲ್ಲಿ, ರಾಜ್ಯ ಮಟ್ಟದ ಪ್ರಥಮ ಯೋಗ ಶಿಕ್ಷಕರ ಸಮ್ಮೇಳನವನ್ನು, ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು.

ನಾಳೆ 24 ಸೋಮವಾರದಿಂದ, ಜುಲೈ 5ರ ಶುಕ್ರವಾರದ ವರೆಗೆ, ದ್ವಿತೀಯ ಪಿಯುಸಿ,ಯ 3 ವಾರ್ಷಿಕ ಪರೀಕ್ಷೆ ರಾಜ್ಯಾದ್ಯಂತ ನಡೆಯಲಿದೆ.

ಅಪ್ರಾಪ್ತ ಬಾಲಕನಿಗೆ ದ್ವಿಚಕ್ರ ವಾಹನ ಓಡಿಸಲು ಅವಕಾಶ ಮಾಡಿಕೊಟ್ಟ, ತಂದೆಗೆ ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ನ್ಯಾಯಾಲಯ, 25 ಸಾವಿರ ರೂಪಾಯಿ ದಂಡ ವಿಧಿಸಿದೆ.

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ರಾಜ್ಯದ ಪಾಲಿನ, 11 ಸಾವಿರದ 495 ಕೋಟಿ ರೂಪಾಯಿ ಅನುದಾನವನ್ನು, ಕೇಂದ್ರ ಶೀಘ್ರ ಬಿಡುಗಡೆ ಮಾಡಲಿ – ಕೃ ್ಣ ಬೈರೇಗೌಡ, ಆಗ್ರಹ.
- ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ, 'ಉತ್ಪನ್ನಗಳ ಸಚಿತೆ', ವಿಶಿಷ್ಟ – ಎನ್. ಚಲುವರಾಯಸ್ವಾಮಿ, ಶ್ಲಾಘನೆ.
- 'ಯುವಜನತೆಗೆ ಉದ್ಯೋಗ': ಕೌಶಲಾಭಿವೃದ್ಧಿ ಇಲಾಖೆಯಿಂದ, ಮಹತ್ವದ ಯೋಜನೆ ಶೀಘ್ರ ಜಾರಿಗೆ – ಶರಣಪ್ರಕಾಶ ಪಾಟೀಲ.
- 'ಡೇಟಾಥಾನ್'; ಅಪರಾಧ ಪ್ರಕರಣ ತಡೆಗಟ್ಟಲು, ನೂತನ ತಂತ್ರಜ್ಞಾನ ಬಳಕೆಗೆ ಪೊಲೀಸ್ ಇಲಾಖೆ, ಆದ್ಯತೆ – ಪ್ರಣಬ್ ಮೊಹಾಂತಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಕಲಾವಿದ/ಅರ್ಜಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೋಲಾರ ಜಿಲ್ಲೆಯ ಅರ್ಹ ಕಲಾವಿದರುಗಳ ಪಟ್ಟಿಯನ್ನು ತಯಾರಿಸಿ, ಗುರುತಿನ ಚೀಟಿ ನೀಡಲು, ಯೋಜಿಸಿದೆ.

ಕಲಾವಿದರು ತಮ್ಮ ಎಲ್ಲ ದಾಖಲೆಗಳ ಸಮೇತ, ನಿಗದಿತ ಅರ್ಜಿ ಭರ್ತಿ ಮಾಡಿ, ಬುಧವಾರ 26 ನೇ ತಾರೀಖು ಸಂಜೆ 5 ಗಂಟೆಯೊಳಗಾಗಿ, ಕೋಲಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿಗೆ ಸಲ್ಲಿಸಲು, ಪ್ರಕಟಣೆ ಕೋರಿದೆ.

ಹರ್ಷ/ಹೊಂಗಲ್/ಟಿಟಿಸಿ ಕೋಲಾರ

ಯುವನಿಧಿ/ಸ್ವಯಂ ಘೋಷಣೆ

ಯುವ ನಿಧಿ ಯೋಜನೆ ಅಡಿ, ನಿರುದ್ಯೋಗ ಭತ್ಯೆ ಪಡೆಯುತ್ತಿರುವ, ಉದ್ಯೋಗಾಕಾಂಕ್ಷಿ ಯುವಜನತೆ, ಪ್ರತಿ ತಿಂಗಳು 25ನೇ ತಾರೀಖಿನ ಒಳಗೆ, ಸೇವಾ ಸಿಂಧು ಪೋರ್ಟಲ್‌ನಲ್ಲಿ ಸ್ವಯಂ ಘೋಷಿತ ಪ್ರಮಾಣ ಪತ್ರ ಸಲ್ಲಿಸಲು, ಆಯಾ ಜಿಲ್ಲೆಗಳ ಉದ್ಯೋಗಾಧಿಕಾರಿಗಳು ಸೂಚಿಸಿದ್ದಾರೆ.

ಅಭ್ಯರ್ಥಿಗಳು ನಿರುದ್ಯೋಗ ಭತ್ಯೆ ಪ್ರತಿ ತಿಂಗಳು ಪಡೆಯಬೇಕಿದ್ದರೆ, ಆಯಾ ತಿಂಗಳ 25ನೇ ತಾರೀಖಿನ ಒಳಗೆ, ತಾವು ನಿರುದ್ಯೋಗಿಯೆಂದು, ವ್ಯಾಸಂಗ ಮುಂದುವರೆಸುತ್ತಿಲ್ಲವೆಂದು ಹಾಗೂ ಸ್ವಯಂ ಉದ್ಯೋಗಿಯಲ್ಲವೆಂದು, ಅರ್ಹ ಅಭ್ಯರ್ಥಿ ಸ್ವಯಂ ಘೋಷಣಾ ಪತ್ರವನ್ನು, ಆನ್ಲೈನ್ ಅಪ್ಲೋಡ್ ಮಾಡುವುದು ಕಡ್ಡಾಯವಾಗಿದೆ.

ಅರ್ಹ ಅಭ್ಯರ್ಥಿ ಸ್ವಯಂ ಘೋ ಣೆ ಮಾಡದಿದ್ದಲ್ಲಿ, ಅಂಥವರ ಖಾತೆಗೆ ನೇರ ನಗದು ವರ್ಗಾವಣೆ ಮಾಡಲಾಗುವುದಿಲ್ಲ ಎಂದು, ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ, ಜಾಲತಾಣ, sevasindhugs.karanataka.gov.in ವೀಕ್ಷಿಸಬಹುದು.

ಹರ್ಷ/ಹೊಂಗಲ್/ಟಿಟಿಸಿ ರಾಮನಗರ/ಕೆ.ವಾ.ಇ.ಬೆಂ.

ಶಾಲೆ/ಹೊರಗುಳಿದ ಮಕ್ಕಳು

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲೂಕಿನ, ಚನ್ನರಾಯಪಟ್ಟಣ ಹೋಬಳಿಯ, ಪಾಪನಹಳ್ಳಿ ಗ್ರಾಮದ, ಕಸ ವಿಂಗಡಣೆ ಘಟಕದಲ್ಲಿ, ಶಾಲೆಯಿಂದ ಹೊರಗುಳಿದ ಒಂಬತ್ತು ಮಕ್ಕಳನ್ನು ಗುರುತಿಸಲಾಗಿದೆ.

ಮಕ್ಕಳ ಸಹಾಯವಾಣಿಗೆ ಬಂದ ದೂರಿನ ಹಿನ್ನೆಲೆ, ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ಮಕ್ಕಳು ಹಾಗೂ ಪಾಲಕರು, ಮೂಲತಃ ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ರಾಜ್ಯದವರಾಗಿದ್ದು, ಮಕ್ಕಳ ರಕ್ಷಣಾಧಿಕಾರಿ, ಶಾಲೆಯಿಂದ ಹೊರಗುಳಿದ ಒಂಬತ್ತು ಮಕ್ಕಳನ್ನು, ಬಾಲ ಮಂದಿರಕ್ಕೆ ಹಸ್ತಾಂತರಿಸಿ, ಪುನರ್ ವಸತಿ ಕಲ್ಪಿಸಿದ್ದಾರೆ.

ಕಸ ವಿಂಗಡಣಾ ಘಟಕದಲ್ಲಿ, ಕಾರ್ಮಿಕರಿಗೆ ಮೂಲಸೌಕರ್ಯ ಒದಗಿಸುವಂತೆ, ಮಾಲಿಕರಿಗೆ ಸೂಚಿಸಿದ್ದಾಗಿ, ಜಿಲ್ಲಾ ಕಾರ್ಮಿಕ ಅಧಿಕಾರಿ ನಾಗೇಂದ್ರ ಎಚ್.ಆರ್. ತಿಳಿಸಿದ್ದಾರೆ.

ಹರ್ಷ/ಹೊಂಗಲ್/ಟಿಟಿಸಿ ಬೆಂ.ಗ್ರಾಮಾಂತರ

ಯಡಿಯೂರಪ್ಪ/ಅಭಿನಂದನೆ

ಮುಂಬರುವ ದಿನಗಳಲ್ಲಿ, ರಾಜ್ಯದ ಚುಕ್ಕಾಣಿಯನ್ನು ಬಿಜೆಪಿ ಹಿಡಿಯುವ ವಿಶ್ವಾಸವಿದೆ; ಪಕ್ಷದ ಎಲ್ಲ ಮುಖಂಡರು, ಕಾರ್ಯಕರ್ತರು ಕಾರ್ಯಪ್ರವೃತ್ತರಾಗುವಂತೆ, ಕೇಂದ್ರದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಕರೆ ನೀಡಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ, ನೂತನ ಬಿಜೆಪಿ–ಜೆಡಿಎಸ್ ಸಂಸದರಿಗೆ ಏರ್ಪಡಿಸಲಾಗಿದ್ದ, ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

<><><>

ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಹೊಂದಾಣಿಕೆಯಿಂದ, ಲೋಕಸಭಾ ಚುಣಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಲಾಗಿದೆ ಎಂದು, ವಿಪಕ್ಷ ನಾಯಕ ಆರ್. ಅಶೋಕ, ಸಮಾರಂಭದಲ್ಲಿ ನುಡಿದರು.

ಹರ್ಷ/ಹೊಂಗಲ್/ಬಿಜೆಪಿ ಎಕ್ಸ್ ಖಾತೆ

ಆಂಗ್ಲ ಮಾಧ್ಯಮ/ಶಾಲೆ

ಹಾವೇರಿ ಜಿಲ್ಲೆ, ಹಾನಗಲ್ ತಾಲೂಕಿನ ಮಾರಂಬೀಡ, ಯಳವಟ್ಟಿ ಹಾಗೂ ನರೇಗಲ್ ಗ್ರಾಮಗಳ, ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ, ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ, ಕನ್ನಡ ಮಾಧ್ಯಮದ ಜೊತೆ, ಇಂಗ್ಲಿ ೕ ಮಾಧ್ಯಮದ ತರಗತಿಗಳನ್ನು ನಡೆಸಲು ಅನುಮತಿ ನೀಡಿ, ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಸುರೇಶ್ ಹುಗ್ಗಿ ಮಾಹಿತಿ ನೀಡಿ, ಹಾವೇರಿ ಜಿಲ್ಲೆಯ ಮೂರು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ, ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲು, ರಾಜ್ಯ ಸರ್ಕಾರ ಅನುಮತಿ ನೀಡಿದೆ ಎಂದರು.

ಹರ್ಷ/ಹೊಂಗಲ್/ಟಿಟಿಸಿ ಹಾವೇರಿ

ಸಿ.ಎಸ್.ಐ.ಆರ್.ನೆಟ್

ಅನಿವಾರ್ಯ ಕಾರಣಗಳಿಂದಾಗಿ, ಜೂನ್ 2024ರ ಜಂಟಿ ಸಿ.ಎಸ್.ಐ.ಆರ್. – ಯು.ಜಿ.ಸಿ. – ನೆಟ್ ಪರೀಕ್ಷೆಯನ್ನು ಮುಂದೂಡಲಾಗಿದೆ ಎಂದು, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ – ಎನ್.ಟಿ.ಎ. ತಿಳಿಸಿದೆ.

ನಾಡಿದ್ದು, 25 ರಿಂದ 27ರ ವರೆಗೆ ನಿಗದಿಯಾಗಿದ್ದ ಪರೀಕ್ಷೆಯನ್ನು ಮುಂದೂಡಲಾಗಿದ್ದು, ಪರಿಷ್ಕೃತ ವೇಳಾಪಟ್ಟಿಯನ್ನು, ಅಧಿಕೃತ ಜಾಲತಾಣ csirnet@nta.ac.in ನಲ್ಲಿ ಘೋಷಿಸುವುದಾಗಿ, ಎನ್.ಟಿ.ಎ. ಪ್ರಕಟಿಸಿದೆ.

ಹರ್ಷ/ಹೊಂಗಲ್/ಎನ್‌ಟಿಎ ಎಕ್ಸ್ ಖಾತೆ